ದಿನಾಂಕ 15.11.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 13 ನೇ ಪ್ರತಿವಾದಿಯ ಪರ ಶ್ರೀ ಟಿ.ಆರ್.ಜಿ., ವಕೀಲರಿಂದಃ-

ನಾನು ಬಸವನಪುರದಲ್ಲಿ ಜನಿಸಿರುತ್ತೇನೆ. 13 ನೇ ಪ್ರತಿವಾದಿ ನನ್ನ ಸಂಬಂಧಿಕರಲ್ಲ. ನಿಪಿ-1 ವಂಶವೃಕ್ಷದಲ್ಲಿ 13 ನೇ ಪ್ರತಿವಾದಿಯ ಹೆಸರನ್ನು ಸೇರಿಸಿಲ್ಲ ಎನ್ನುವುದು ನಿಜ. ಸರ್ವೇ ನಂ.110 ಮೂಲತಃ ಎಸ್.ಎನ್.ತಿಮ್ಮಯ್ಯರವರು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ. ಸದರಿಯವರು ಯಾರಿಂದ ಸದರಿ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಎಸ್.ಎನ್.ತಿಮ್ಮಯ್ಯ ನನ್ನ ತಾತ. ನನ್ನ ತಾತ ಎಸ್.ಎನ್.ತಿಮ್ಮಯ್ಯನವರಿಗೆ ತಿಮ್ಮಕ್ಕ ಎಂಬ ಹೆಂಡತಿ ಇದ್ದರು. ನನ್ನ ತಾತ ಎಸ್.ಎನ್.ತಿಮ್ಮಯ್ಯನಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಒಬ್ಬ ಮಗಳು. ಅವರ ಹೆಸರುಗಳು ರಂಗಸ್ವಾಮಯ್ಯ, ಗಣೇಶಪ್ಪ, ಸದಪ್ಪ, ಪುಟ್ಟಸ್ವಾಮಿ ಹಾಗೂ ಯಶೋದಮ್ಮ.

2. ನನ್ನ ತಾತ ಸರ್ವೇ ನಂ.110 ರ ಜಮೀನನ್ನು ಖರೀದಿಸಿದ ನಂತರದಲ್ಲಿ ಸದರಿ ಸ್ವತ್ತು ಅವರ ಹೆಸರಿನಲ್ಲಿ ಮಾತ್ರ ಇದ್ದು ಅದನ್ನು ವಿಭಾಗ ಮಾಡಿಕೊಳ್ಳಲಾಗಿಲ್ಲ. ನನ್ನ ತಾತನ ಹೆಸರಿನಲ್ಲಿನ ಕ್ರಯಪತ್ರವನ್ನು ಹಾಜರುಪಡಿಸಲಾಗಿದೆಯೇ ಎನ್ನುವುದು ನನಗೆ ಗೊತ್ತಿಲ್ಲ. ಸರ್ವೇ ನಂ.110 ರ ಪಹಣಿ ಪ್ರಸ್ತುತ ಸರೋಜಮ್ಮ ಹಾಗೂ ಕೃಷ್ಣಪ್ಪನ ಹೆಸರಿನಲ್ಲಿದೆ. ಸಾಕ್ಷಿಯು ಮುಂದುವರೆದು ಅದರ ಪೈಕಿ 19 ಗುಂಟೆ ಜಮೀನನ್ನು ಬಿ.ಎಂ.ಎಸ್ ಕಾಲೇಜಿನವರಿಗೆ ಮಾರಾಟ ಮಾಡಲಾಗಿದ್ದು

ಅದು ಅವರ ಹೆಸರಿನಲ್ಲಿದೆ. ಸದರಿ ಖರೀದಿದಾರರನ್ನು ಈ ದಾವೆಯಲ್ಲಿ ಪಾರ್ಟಿ ಮಾಡಿಲ್ಲ. ಸಾಕ್ಷಿಯು ಮುಂದುವರೆದು ಸರೋಜಮ್ಮ ಹಾಗೂ ಕೃಷ್ಣಪ್ಪನ ಹೆಸರಿನಲ್ಲಿ ಪಹಣಿ ಬರುತ್ತಿರುವ ಕಾರಣ ಬಿ.ಎಂ.ಎಸ್ ಕಾಲೇಜಿನವರನ್ನು ಪಾರ್ಟಿ ಮಾಡಿಲ್ಲ ಎಂದು ನುಡಿಯುತ್ತಾರೆ. ಮಾಯಮ್ಮ ಎಂಬಾಕೆ ನಮಗೆ ಸಂಬಂಧಿಕಳಲ್ಲ.

2. ಸರ್ವೇ ನಂ.110 ರ ಪಹಣಿ ಮೊದಲಿಗೆ ಶಿವಣ್ಣನ ಹೆಸರಿನಲ್ಲಿತ್ತು ಎನ್ನುವುದು ನಿಜ. ಶಿವಣ್ಣ ಪೌತಿಯಾದ ನಂತರದಲ್ಲಿ ಸದರಿ ಸ್ವತ್ತಿನ ಪಹಣಿ ಮಾಯಮ್ಮನ ಹೆಸರಿಗೆ ದಾಖಲಾಯಿತು ಎನ್ನುವುದು ನಿಜ. ಶಿವಣ್ಣ ನನ್ನ ಸಂಬಂಧಿಕನಲ್ಲ ಎನ್ನುವುದು ನಿಜ ಹಾಗೂ ಅದೇ ಕಾರಣಕ್ಕಾಗಿ ಆತನ ಹೆಸರನ್ನು ನಿಪಿ-1 ವಂಶವೃಕ್ಷದಲ್ಲಿ ಸೇರಿಸಿಲ್ಲ ಎನ್ನುವುದು ನಿಜ. ಸರ್ವೇ ನಂ.110 ಪಹಣಿ 1985-86 ರಿಂದ 2021-22 ರವರೆಗೂ ಮಾಯಮ್ಮನ ಹೆಸರಿನಲ್ಲಿದೆ ಎನ್ನುವುದು ನಿಜ. 2021-22 ರ ನಂತರ ಸದರಿ ಸ್ವತ್ತಿನ ಪಹಣಿ 13 ನೇ ಪ್ರತಿವಾದಿ ಸರೋಜಮ್ಮನ ಹೆಸರಿಗೆ ದಾಖಲಾಗಿದೆ ಎನ್ನುವುದು ನಿಜ. ನಾನು ಹಾಜರುಪಡಿಸಿರುವ ಪಹಣಿಗಳಲ್ಲಿ ಮಾಯಮ್ಮನ ಹೆಸರಿತ್ತು ಎನ್ನುವುದು ನಿಜ. ಸಾಕ್ಷಿಯು ಮುಂದುವರೆದು ಮತ್ತೊಮ್ಮೆ ಪಡೆದುಕೊಳ್ಳಲಾದ ಪಹಣಿಗಳಲ್ಲಿ ಸರೋಜಮ್ಮನ ಹೆಸರಿತ್ತು ಎಂದು ನುಡಿಯುತ್ತಾರೆ. ಮಾಯಮ್ಮ ಹಾಗೂ ಸರೋಜಮ್ಮನ ಹೆಸರಿನಲ್ಲಿ ಪಹಣಿ ಇದ್ದಾಗ್ಯೂ ಸಹಿತ ಅವರನ್ನು ಈ ದಾವೆಯಲ್ಲಿ ಏಕೆ ಸೇರಿಸಿಲ್ಲ? ಎಂದರೆ ಸಾಕ್ಷಿಯು ನಾವೇ ಅವರನ್ನು ಸೇರಿಸಿದ್ದೇವೆ ಎಂದು ನುಡಿಯುತ್ತಾರೆ.

3. ದಿನಾಂಕ 10.05.1960 ರಂದು ತಿಮ್ಮಯ್ಯ ಬಿನ್ ನಡಕೇರೆಗೌಡ

ರವರು ಸರ್ವೆ ನಂ.110 ರ 1 ಎಕರೆ 33 ಗುಂಟೆ ಜಮೀನನ್ನು ಸೈಯದ್ ಅಹಮದ್ ಸಾಹೇಬ್ ಬಿನ್ ನೀರ್ ಗುಲಾಮ್ ಹುಸೇನ್ ಸಾಹೇಬ್‌ರವರಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ದಿನಾಂಕ 18.05.1962 ರಂದು ಸೈಯದ್ ಅಹಮದ್ ಸಾಹೇಬ್ ಬಿನ್ ನೀರ್ ಗುಲಾಮ್ ಹುಸೇನ್ ಸಾಹೇಬ್‌ರವರು ಸರ್ವೆ ನಂ.110 ರ 1 ಎಕರೆ 33 ಗುಂಟೆ ಜಮೀನನ್ನು ಶಿವಣ್ಣ ಬಿನ್ ಭದ್ರೇಗೌಡರವರಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ.

ಈ ಹಂತದಲ್ಲಿ 13 ನೇ ಪ್ರತಿವಾದಿಯ ಪರ ವಕೀಲರ ಮನವಿಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.